ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ (ಕೇಂದ್ರ)

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ     ದಿನಾಂಕ : DATE : 20/02/2020

# ಎಆರ್‌ಟಿ ಮಸೂದೆಗೆ ಸಂಪುಟ ಒಪ್ಪಿಗೆ

ಪ್ರ. ವಾ. 20-2-20

ನವದೆಹಲಿ (ಪಿಟಿಐ): ಕೃತಕ ಗರ್ಭಧಾರಣೆ ಪ್ರಕ್ರಿಯೆಯಾದ 'ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ' (ಎಆರ್‌ಟಿ) ಮಸೂದೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ.

ತಂತ್ರಜ್ಞಾನದ ನೆರವಿನಿಂದ ಗರ್ಭ ಧರಿಸಲು ವೈದ್ಯಕೀಯ ಸೇವೆ ಒದಗಿಸುವ ಆಸ್ಪತ್ರೆಗಳು, ತಜ್ಞರ ಮಾಹಿತಿಯನ್ನು ಒಳಗೊಂಡ ರಾಷ್ಟ್ರೀಯ ನೋಂದಣಿ ಹಾಗೂ ಪ್ರಾಧಿಕಾರ ರಚನೆಯಂತಹ ಪ್ರಮುಖ ಪ್ರಸ್ತಾವಗಳನ್ನು ಈ ಮಸೂದೆ ಒಳಗೊಂಡಿದೆ.

ಭ್ರೂಣದ ಲಿಂಗ ಪತ್ತೆ, ಭ್ರೂಣಗಳ ಮಾರಾಟಕ್ಕೆ ಕಠಿಣ ಶಿಕ್ಷೆ, ಕೃತಕ ಗರ್ಭಧಾರಣೆಗೆ ಸಮ್ಮತಿಸುವ ದಂಪತಿ, ಮಹಿಳೆ ಹಾಗೂ ದಾನಿಗಳ ಮಾಹಿತಿಯನ್ನು ಗೌಪ್ಯವಾಗಿಡುವುದು. ಭ್ರೂಣ ಮಾರಾಟ ಮಾಡುವವರಿಗೆ ಮೊದಲ ಸಲ ₹ 10 ಲಕ್ಷ ದಂಡ, ಎರಡನೇ ಬಾರಿ ತಪ್ಪಿತಸ್ಥ ಎಂದು ಕಂಡುಬಂದಲ್ಲಿ 12 ವರ್ಷಗಳ ಜೈಲು ಶಿಕ್ಷೆ ವಿಧಿಸುವಂತಹ ಅಂಶಗಳೂ ಈ ಮಸೂದೆಯಲ್ಲಿವೆ ಎಂದು ಸಚಿವೆ ಸ್ಮೃತಿ ಇರಾನಿ ಹೇಳಿದ್ದಾರೆ.

'ಎಆರ್‌ಟಿ ಸೇವೆಗಳ ಮೇಲೆ ನಿಯಂತ್ರಣವನ್ನು ಮತ್ತಷ್ಟೂ ಹೆಚ್ಚಿಸುವ ಈ ಮಸೂದೆ ಸಂತಾನರಹಿತ ದಂಪತಿಗಳಲ್ಲಿ ಹೊಸ ಭರವಸೆ ಮೂಡಿಸಲಿದೆ' ಎಂದೂ ಅವರು ಹೇಳಿದ್ದಾರೆ.

16